ಶುರು ಆಗಿತ್ತು. ನಮ್ಮ ಮನೆಯಲ್ಲಿ ಕಲರ್ ಟಿವಿ ಇತ್ತು. ಆದರೆ ನಮ್ಮ ತಂದೆ ತಾಯಿ ಇಬ್ಬರೂ ಶಿಕ್ಷಣ ಕ್ಷೇತ್ರದವರು, ನಮಗೂ ಬಾಲ್ಯದ ಅಭ್ಯಾಸವಾಗಿತ್ತು. ನಮ್ಮ ಮನೆಯಲ್ಲಿ ಟಿವಿ ನಮಗೆ ಬೇಕಾದಾಗ, ಸ್ವಲ್ಪವೇ ಹೊತ್ತು ಇರುತ್ತಿತ್ತು. ಉಳಿದ ಹೆಚ್ಚಿನ ಸಮಯ ಪರದೆಯ ಹಿಂದೆ ನಿದ್ದೆ ಮಾಡುತ್ತಿತ್ತು.

## ದಾಂಪತ್ಯ

ಎರಡನೆಯ ಅಧ್ಯಾಯ, ದಾಂಪತ್ಯ. ನಾನು ಅಭಿ ಕಲ್ಯಾಣ್ ಅವರನ್ನು ಮದುವೆಯಾಗಿ, ಕೆಲ ದಿನಗಳಲ್ಲಿ ಚೆನ್ನೈನಲ್ಲಿ 'ಸೆಟಲ್' ಆದೆ. ಹೊಸ ಸಂಸಾರವನ್ನು ಸ್ವತಂತ್ರವಾಗಿ ಹೂಡಿಕೊಳ್ಳಬೇಕಾಗಿತ್ತು. ನಮ್ಮ ಆರ್ಥಿಕ ಸಾಮರ್ಥ್ಯ ಎಷ್ಟು ಎನ್ನುವುದನ್ನೂ ಗಮನದಲ್ಲಿ ಇಟ್ಟುಕೊಂಡು ಮನೆಗೆ ಏನೇನು ಬೇಕು ಎಂದು ಇಬ್ಬರೂ ಸೇರಿ ಪಟ್ಟಿ ಮಾಡಿದೆವು. ಇದರಲ್ಲಿ ಟಿವಿ ಇರಲಿಲ್ಲ ಎಂಬುದು ನಮಗೂ ಆಗ ಗಮನಕ್ಕೆ ಬಂದಿರಲಿಲ್ಲ.

ಇಬ್ಬರೂ ಖಾಸಗಿ ಕಂಪನಿಗಳಲ್ಲಿ ನೌಕರಿ ಮಾಡುತ್ತಿದ್ದೆವು. ಬೆಳಿಗ್ಗೆ ಬೇಗ ಹೊರಡುವುದು, ಸಂಜೆ ತಡವಾಗಿ ಮನೆ ಸೇರುವುದು. ಇರುವಷ್ಟು ಸಮಯ ನಮಗೆ ಮುಖ್ಯವಾದ ವಿಷಯಗಳ ಕುರಿತು ಮಾತಾಡಿಕೊಳ್ಳುವುದರಲ್ಲಿ, ಜಗಳವಾಡುವುದರಲ್ಲಿ, ಮತ್ತೆ ಸಂಧಾನ ಮಾಡಿಕೊಂಡು ಖುಶಿ ಪಡುವುದರಲ್ಲಿಯೇ ಸಮಯ ಹೋಗಿ ಬಿಡುತ್ತಿತ್ತು. ನಮ್ಮ ಬದುಕೇ ನಮಗೆ ರಂಜನೆ, ಕಲಿಕೆ ಎಲ್ಲವೂ ಆಗಿತ್ತು. ನಮ್ಮ ಆಸಕ್ತಿಯ ಕ್ಷೇತ್ರಗಳಲ್ಲಿ ಪ್ರತ್ಯೇಕವಾಗಿ ರಂಜನೆಗಾಗಿ ಎಂದು ಟಿವಿ ನೋಡುವ ಅಗತ್ಯ ಬೀಳಲೇ ಇಲ್ಲ.

## ತಾಯ್ತನ

ಮೂರನೇ ಅಧ್ಯಾಯ, ತಾಯ್ತನ. ನಮ್ಮ ಮನೆಯಲ್ಲಿ ಟಿವಿ ಇಲ್ಲ ಎನ್ನುವ ವಿಚಾರ ಬಂದಾಗಲೆಲ್ಲ, 'ದಿನದ ಎಂಟು ಗಂಟೆಯಾದರೂ ಟಿವಿ ನೋಡದೇ ಇದ್ದರೆ ಅದೆಂಥ ಜೀವನ' ಎಂದು ಭಾವಿಸುತ್ತಿದ್ದ ನಮ್ಮ ಸ್ನೇಹಿತರು, ನೆರೆಹೊರೆಯವರು ಹೇಳುತ್ತಿದ್ದರು– ಮಕ್ಕಳಾದ ಮೇಲೆ ಗೊತ್ತಾಗುತ್ತೆ ಇರಿ–ಅಂತ. 'ಈಗಿನ ಮಕ್ಕಳಿಗೆ ಟಿವಿ ಇಲ್ಲದಿದ್ದರೆ ಆಗೋದೇ ಇಲ್ಲ' ಎಂದು ಬೆದರಿಕೆಯನ್ನೂ ಒಡ್ಡುತ್ತಿದ್ದರು. ಗರ್ಭಿಣಿ ತಾಯಂದಿರು ನೋಡುವ ಟಿವಿ ಸೀರಿಯಲ್‌ಗಳನ್ನು ಗರ್ಭದಲ್ಲಿರುವಾಗಲೇ ನೋಡುವ ಅಭ್ಯಾಸ ಹಾಕಿಕೊಂಡು ಮಕ್ಕಳು ಹುಟ್ಟುತ್ತವೇನೋ ಎನ್ನುವಂತೆ ಆಡುತ್ತಿದ್ದರು. ಆದರೂ ಅವರು ಹೇಳುವುದು ನಿಜವೇನೋ ಅನ್ನಿಸುತ್ತಿತ್ತು.

ನಮಗೂ ಮಗು ಆಯಿತು. ಹೆಣ್ಣು ಮಗು, ಕೌಶಲ್ಯ. ಮಗು ಹುಟ್ಟಿದ ನಂತರದಿಂದ ಒಂದೂ ಕಾಲು ವರ್ಷ ನಾನು ಕೆಲಸಕ್ಕೆ ಹೋಗಲಿಲ್ಲ. ಮಗುವನ್ನು ನೋಡಿಕೊಂಡು ಮನೆಯಲ್ಲಿಯೇ ಇರುವುದು ಎಂಬುದು ನನ್ನ ಮತ್ತು ಅಭಿಯ ನಿರ್ಧಾರವಾಗಿತ್ತು. ಈಗ ಮನೆಗೆಲಸ ಮುಗಿಸಿದ ಕೂಡಲೇ ಇಡೀ ಹೊತ್ತು ನಾನು ನನ್ನ ಮಗುವಿನೊಂದಿಗೆ ಕಳೆಯುತ್ತಿದ್ದೆ. ಆಕೆಯ ಸ್ನಾನ, ಊಟ, ಆರೈಕೆ, ಬಟ್ಟೆ ಬರೆ –ಏನೇ ಮಾಡಿದರೂ ಆಕೆಯೊಂದಿಗೆ ಮಾತಾಡುತ್ತಲೇ, ಆಕೆಯೊಂದಿಗೆ ಆಟವಾಡುತ್ತಲೇ ಕಾಲ ಹೋಗುತ್ತಿತ್ತು. ಸಂಜೆ ಅಭಿ ಮನೆಗೆ ಹಿಂದಿರುಗಿದ ನಂತರ ನಾನು ಅಡುಗೆ ಮನೆಗೆ ಹೋದರೆ ಮಗುವಿನೊಂದಿಗೆ ಆಡುವ ಕೆಲಸ ಅವರದಾಗುತ್ತಿತ್ತು. ಹೀಗಾಗಿ ಮಗುವಿಗೂ ಬಿಡುವಿಲ್ಲದ ಸಾಂಗತ್ಯ, ಸಂತಸ, ಚಟುವಟಿಕೆ.

ಅವಳು ನರ್ಸರಿ, ಪ್ರೈಮರಿ ಶಾಲೆ ಓದುವ ಹೊತ್ತಿಗೆ ಅವಳ ಶಾಲೆಯ ಗೆಳತಿಯರು ಮನೆಗೆ ಬರುತ್ತಿದ್ದರು. ಅವರು ಬಂದ ಕೂಡಲೇ ಕೇಳುತ್ತಿದ್ದುದು, 'ಆಂಟಿ, ಟಿವಿ ಹಾಕಿ, ನಾವು ನೋಡಬೇಕು' ಅಂತ. 'ನಮ್ಮ ಮನೇಲಿ ಟಿವಿ ಇಲ್ಲವಲ್ಲ, ಪುಟ್ಟ' ಎಂದರೆ ಆ ಮಕ್ಕಳಿಗೆ ನಂಬಿಕೆ ಬರುತ್ತಿರಲಿಲ್ಲ. ಹಾಲಿನಲ್ಲಿ, ಬೆಡ್‌ರೂಮಿನಲ್ಲಿ ಓಡಾಡಿ ಚೆಕ್ ಮಾಡುತ್ತಿದ್ದರು.

ಅಷ್ಟರಲ್ಲಿ ಕೌಶಲ್ಯ ತನ್ನ ಪೆಂಡೋರಾ ಬಾಕ್ಸನ್ನು ತೆರೆಯುತ್ತಿದ್ದಳು. ಮಕ್ಕಳ ಪುಸ್ತಕಗಳು, ಪೇಂಟಿಂಗ್ ಸಾಮಗ್ರಿ, ಸ್ಪೆಲ್ಲಿಂಗ್ ಗೇಮ್ಸ್, ಇನ್ನು ಏನೇನೋ ಇದ್ದವು. ಅಚ್ಚರಿಯ ಸಂಗತಿಯೆಂದರೆ, ಇತರ ಮಕ್ಕಳೂ ಕೂಡ ಸ್ವಲ್ಪವೇ ಸಮಯದಲ್ಲಿ ಟಿವಿಯ ವಿಚಾರವನ್ನೇ ಮರೆತು ಆಟದಲ್ಲಿ ತಲ್ಲೀನರಾಗುತ್ತಿದ್ದರು.

ನಾನು ಅಭಿ ಮಗಳಿಗಾಗಿ ಅನೇಕ ಬಗೆಯ ಕಲಿಕೆಯ ಸಾಮಗ್ರಿ, ಆಟಗಳನ್ನು ಹೊಂದಿಸಿ ಕೊಡುತ್ತಿದ್ದೆವು, ನಾವೂ ಜೊತೆಗೆ ಆಡುತ್ತಿದ್ದೆವು. ಬರಬರುತ್ತಾ ಕೌಶಲ್ಯನಿಗೆ ಶಾಲೆಯ ಪಾಠ ಕಲಿಕೆ ಸುಲಭವಾಗತೊಡಗಿತು. ಹೋಮ್‌ವರ್ಕ್ ಹೆಚ್ಚು ಹೊತ್ತು ತೆಗೆದುಕೊಳ್ಳುತ್ತಿರಲಿಲ್ಲ. ಓದುವ ಹವ್ಯಾಸ ಅಂಟಿಕೊಂಡಿತು. ತನ್ನದೂ ಒಂದು ಪುಟ್ಟ ಗ್ರಂಥ ಮೂಲೆಯನ್ನು ರೂಪಿಸಿಕೊಂಡಿದ್ದಳು. ಸಂಗ್ರಹ ದೊಡ್ಡದಾಯಿತು. ಬೇಡಿದಷ್ಟು ಪುಸ್ತಕ ಖರೀದಿಸಲು ಕಷ್ಟವಾದಾಗ, ನಾವು ಒಂದು ಟ್ಯಾಬ್ ಖರೀದಿಸಿಕೊಟ್ಟೆವು. ಅಭಿ ಅದರಲ್ಲಿ ನೂರಾರು ಪುಸ್ತಕಗಳನ್ನು ತುಂಬಿ ಕೊಟ್ಟರು. ಆದರೂ ಮೂರು ಹೊತ್ತು ಪುಸ್ತಕ ಓದುವುದಷ್ಟೆ ಮಾಡುವಂತಿಲ್ಲ ಎಂಬ ಒಪ್ಪಂದ.

ಶಾಲೆಯಲ್ಲಿ ತನಗೆ ಸಿಕ್ಕ ಮನ್ನಣೆಯಿಂದ ಕೌಶಲ್ಯಳ ಸ್ವವಿಶ್ವಾಸ ಹೆಚ್ಚಾಯಿತು. ಶಾಲೆಯಲ್ಲಿ ಯಾವುದೇ ಸಮಾರಂಭ ಇರಲಿ, ಇವಳ ಒಂದು ಕಾರ್ಯಕ್ರಮ ಇರಲೇಬೇಕು, ಅದೂ ಸರ್ವಶ್ರೇಷ್ಠವೂ ಆಗಿರಬೇಕು ಎಂಬುದು ಆಕೆಯ ಶಿಕ್ಷಕಿಯರ ನಿರೀಕ್ಷೆ ಕೂಡ. ಬೆಂಗಳೂರಿನಲ್ಲಿರುವ ತಾತ, ಅಬ್ದುಲ್ ರೆಹಮಾನ್ ಪಾಷ ಸ್ಕ್ರಿಪ್ಟ್ ಬರೆದುಕೊಡುವುದು, ಅಭಿ ಮತ್ತು ನಾನು ಪ್ರಾಪರ್ಟಿ, ಕಾಸ್ಟ್ಯೂಮ್ ರೆಡಿ ಮಾಡುವುದು, ರಿಹರ್ಸಲ್ ಮಾಡಿಸುವುದು.! ಎಲ್ಲಿದೆ ಸ್ವಾಮಿ, ಬಿಡುವು, ಟಿವಿ ನೋಡಲು?

ಕೌಶಲ್ಯ, ಶಾಲೆಯ ಕಲಿಕೆಯ ಜೊತೆ ಶಾಲೆಯಲ್ಲಿಯೇ ಅಥವಾ ಹೊರಗಿನ ಸಂಸ್ಥೆಗಳಲ್ಲಿ, ಸ್ವಿಮಿಂಗ್, ಜಿಮ್ನ್ಯಾಸ್ಟಿಕ್ಸ್, ಭರತನಾಟ್ಯ, ಶಾಸ್ತ್ರೀಯ ಸಂಗೀತ, ಪಾಶ್ಚಾತ್ಯ ಸಂಗೀತ, ನಟನೆ, ಬರವಣಿಗೆ, ಪೇಂಟಿಂಗ್, ಕ್ವಿಲಿಂಗ್, ಜ್ಯುಯಲರಿ, ಕ್ಲೇಮಾಡಲಿಂಗ್, ಬುಕ್ ಮಾರ್ಕರ್, ಬ್ಯಾಗ್ ಮೇಕಿಂಗ್ ಇತ್ಯಾದಿಗಳಿಗಾಗಿ ಸಮಯವನ್ನು ತೆಗೆಯುತ್ತಾಳೆ. ಹೊರಾಂಗಣದಲ್ಲಿ ಸೈಕ್ಲಿಂಗ್, ಷಟ್ಲ್ ಆಟ. ಹತ್ತಿರದಲ್ಲಿಯೇ ಸಮುದ್ರ ತೀರವಿದೆ. ಕೌಶಲ್ಯ ತನ್ನ ಎಲ್‌ಕೆಜಿಯಿಂದ ಹಿಡಿದು ಈಗಿನ ಐದನೇ ತರಗತಿಯ ವರೆಗೆ ಹಲವಾರು ಪ್ರಶಸ್ತಿ, ಮನ್ನಣೆಗಳನ್ನು ತನ್ನ ಮುಡಿಗೇರಿಸಿಕೊಂಡಿದ್ದಾಳೆ. ಕೆಲವು ಮುಖ್ಯವಾದುವು: ನ್ಯಾಷನಲ್ ಅಸ್ಟ್ರಾನಮಿ ಅಂಡ್ ಸೈನ್ಸ್ ಒಲಂಪಿಯಡ್‌ನಲ್ಲಿ ಮೊದಲ ಸ್ಥಾನ ಚಿನ್ನದ ಪದಕ, ವೇಲಮ್ಮಾಳ್ ಸ್ಟೇಟ್ ಲೆವೆಲ್ ಸೈನ್ಸ್ ಟ್ಯಾಲೆಂಟ್ ಸರ್ಚ್ ಎಗ್ಸಾಮ್–ಮೂರನೇ ಸ್ಥಾನ– –5000 ರೂಪಾಯಿ ನಗದು; ಸ್ಪೆಲ್‌ಬೀ ಸ್ಟೇಟ್, ನ್ಯಾಷನಲ್ ಮತ್ತು ಇಂಟರ್‌ನ್ಯಾಷನಲ್ ಅಚೀವ್‌ಮೆಂಟ್ ಅವಾರ್ಡ್–ಚಿನ್ನದ ಪದಕ; ಟ್ರಿನಿಟಿ ಕಾಲೇಜ್, ಲಂಡನ್ ಡ್ರಮ್ಯಾಟಿಕ್ಸ್ – ಸತತ ಮೂರು ವರ್ಷ ಡಿಸ್ಟಿಂಕ್ಷನ್‌ನೊಂದಿಗೆ ಉತ್ತೀರ್ಣ; ಇಂಗ್ಲಿಷ್ ಒಲಂಪಿಯಡ್ ಅವಾರ್ಡ್– ಕಳೆದ ಐದು ವರ್ಷಗಳಿಂದ ಜೋನಲ್ ಎಕ್ಸಲೆನ್ಸ್ ಅವಾರ್ಡ್, ಮೂರು ಬಾರಿ ಚಿನ್ನದ ಪದಕ ಇತ್ಯಾದಿ. ಇಪ್ಪತ್ತಕ್ಕೂ ಹೆಚ್ಚು ಸ್ಕಿಟ್‌ಗಳಲ್ಲಿ, ಎರಡು ಕಿರುಚಿತ್ರಗಳಲ್ಲಿ, ಒಂದು ಜಾಹೀರಾತು ಚಿತ್ರದಲ್ಲಿ ಅಭಿನಯಿಸಿದ್ದಾಳೆ. ಫ್ಯಾಷನ್ ಶೋಗಳಲ್ಲಿ ಭಾಗವಹಿಸಿದ್ದಾಳೆ.

ನಾವು ಸಿನಿಮಾನೂ ನೋಡುತ್ತೇವೆ, ಕಾರ್ಟೂನ್ ಕೂಡ ನೋಡುತ್ತೇವೆ. ಚೆನ್ನಾಗಿದೆ ಎಂಬ ವಿಮರ್ಶೆ ನೋಡಿಕೊಂಡು ಹತ್ತಿರದ ಥಿಯೇಟರಿನಲ್ಲಿ ನೋಡುತ್ತೇವೆ. ಇಂಟರ್‌ನೆಟ್‌ನಲ್ಲಿ ಆಯ್ದ ಕಾರ್ಯಕ್ರಮಗಳನ್ನು ಎಲ್ಲರೂ ಕೂತು ನೋಡುತ್ತೇವೆ. ಮಕ್ಕಳು, ದೊಡ್ಡವರು ಕಲಿಯುವುದಕ್ಕೆ ಇರುವ ಕಾರ್ಯಕ್ರಮಗಳಿಗೆ ಇಂಟರ್‌ನೆಟ್‌ನಲ್ಲಿ ಬರವಿಲ್ಲ. ಈ ಮಾದರಿಯಲ್ಲಿ ರಂಜನೆ, ಕಲಿಕೆಯನ್ನು ಮಾಡುವಾಗ ಟಿವಿಯಲ್ಲಿ ಇರುವಂತೆ ಜಾಹೀರಾತುಗಳ ಆಕ್ರಮಣ ಇರುವುದಿಲ್ಲ ಎಂಬುದೂ ಒಂದು ಗಮನಾರ್ಹ ಅಂಶ.

ಇವತ್ತು ಯಾವುದೇ ಸಾಧಾರಣ ಮನೆಯಲ್ಲೂ ಟಿವಿ ಯಲ್ಲಿ ಕನಿಷ್ಠ 200 ಚಾನಲ್‌ಗಳು ಬರುತ್ತವೆ. ದಿನದ ಇಪ್ಪತ್ನಾಲ್ಕು ಗಂಟೆಯೂ ಪ್ರಸಾರ. ಎಂದರೆ ಒಂದು ದಿನ ಇಂತಹ ಒಂದು ಮನೆಯಲ್ಲಿ 4800 ಗಂಟೆಗಳ ರಂಜನೆ ಲಭ್ಯ. ಮಕ್ಕಳು, ಮಹಿಳೆಯರು, ಹಿರಿಯರು, ಯುವಕರು ಹೀಗೆ ಯಾವುದೇ ತಾರತಮ್ಯ ಇಲ್ಲದೇ ಪ್ರಸಾರವಾಗುವ ಕಾರ್ಯಕ್ರಮಗಳು; ಟಿಆರ್‌ಪಿ ಸ್ಪರ್ಧೆಯ ಧಾವಂತದಲ್ಲಿ ನೀತಿ ನಿಯಮಗಳನ್ನು ಗಾಳಿಗೆ ತೂರಿ ಅಸಹ್ಯಕರವಾದ ದೃಶ್ಯ, ಸಂಭಾಷಣೆ, ನಿರೂಪಣೆ ಇರುವ ಟಿವಿ ಪ್ರಸಾರದ ಪ್ರಭಾವಕ್ಕೆ ಮಕ್ಕಳನ್ನು ಒಡ್ಡಬಹುದೇ?

ಈ ಪ್ರಶ್ನೆ ನಿಮಗೆ. ನಮಗೆ ಈ ಆತಂಕವೇ ಇಲ್ಲ. ಏಕೆಂದರೆ ನಮ್ಮ ಮನೆಯಲ್ಲಿ ಈ ಅಪಾಯಕಾರಿ ವಸ್ತುವೇ ಇಲ್ಲ. ಟಿವಿ ಇಲ್ಲದೆಯೂ ನಮ್ಮ ಮನೆಯಲ್ಲಿ ಎಲ್ಲರೂ ನೆಮ್ಮದಿಯಿಂದ, ರಂಜನೆಯ ಜೊತೆಗೇ ಬದುಕುತ್ತಿದ್ದೇವೆ. ಕೌಶಲ್ಯ 'ಅಮ್ಮಾ ಟಿವಿ ಹಾಕು' ಎಂದು ಯಾವತ್ತೂ ಕೇಳಿಯೇ ಇಲ್ಲ.

(ಸಾಂಕೇತಿಕ ಚಿತ್ರ: ಕೇಶವ ವಿಟ್ಲ)